**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.513/2009**

**ಸಿ.ಡಬ್ಲ್ಯೂ- 5          ಪಿ.ಡಬ್ಲ್ಯೂ- 4**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸವೇಗೌಡ |
| ತಂದೆಯ/ ಗಂಡನ ಹೆಸರು | : | ಶೆಟ್ಟಿಗೌಡ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ನಿವೃತ್ತ ವಾಣಿಜ್ಯ ಪರೀವಿಕ್ಷಕರು |
| ವಾಸ ಸ್ಥಳ | : | ಮೈಸೂರು |

**ದಿನಾಂಕ 24.07.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2006 ರಿಂದ 2009 ರವರೆಗೆ ವಾಣಿಜ್ಯ ಪರೀವಿಕ್ಷಕರು ಆಗಿ ಮೈಸಾುರು ವಲಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಚಾಸಾ1 ರವರ ಜೊತೆ ಕೆಲಸ ಮಾಡುತ್ತಿದ್ದಾಗ ದಿಃ22.06.2009 ರ 4.00 ಗಂಟೆ ಸಮಯಲ್ಲಿ ವಿರಾಜಪೇಟೆ ಮಾರ್ಗದಿಂದ ಅಕ್ರಮವಾಗಿ ಮೆಣಸನ್ನು ಹುಣಸೂರು ಹೆಚ್.ಡಿ.ಕೋಟೆ, ಸರಗೂರು, ಗಂಡ್ಲೂಪೇಟೆ ಮೂಲಕ ಬೇರೆ ರಾಜ್ಯ ಕ್ಕೆ ಹೋಗುತ್ತಿದೆ ಎಂದು ಚಾಸಾ1 ರವರಿಗೆ ಮಾಹಿತಿ ಬಂದಿರುತ್ತದೆ ಎಂದು ರಾತ್ರಿ 8.30 ಗಂಟೆಗೆ ಕಛೇರಿಗೆ ಬರಬೇಕೆಂದು ನನಗೂ ಚಾಸಾ4 ಮತ್ತು 6 ರವರಿಗೆ ತಿಳಿಸಿರುತ್ತಾರೆ. ನಂತರ ಚಾಸಾ1 ಮತ್ತು 4, 6 ರವರ ಕಛೇರಿಗೆ ಬಂದಿರುತ್ತಾರೆ. ಕಛೇರಿಯಿಂದ ರಾತ್ರಿ 9.00 ಗಂಟೆಗೆ ಕೆಎ-02-ಜಿ447 ವಾಹನದಲ್ಲಿ ಮೈಸೂರಿನಿಂದ ನಂಜಗೂಡು ಮಾರ್ಗವಾಗಿ ಬೇಗೂರು ಸರಗೂರು ಕಡೆಗೆ

ಗಸ್ತು ತಿರುಗುತ್ತಿರುವಾಗ ನಮ್ಮ ಹಿಂದೆ ಎಡಿಯಾಲ ಬಳಿ ಒಂದು ವಾಹನ ನಿಲ್ಲಿಸಿಕೊಂಡಿದ್ದು, ಹೋಗಿರುತ್ತಾರೆ. ನಂತರ ನಾವು ರಾತ್ರಿಯೇಲ್ಲ ಗಸ್ತು ಮಾಡುತ್ತಿರುವಾಗ ಎಡಿಯಾಲ ಕಡೆಯಿಂದ ಸರಗೂರು ಕಡೆಗೆ ನಾವು ಬರುತ್ತಿರುವಾಗ ಒಂದು ವಾಹನ ನಮ್ಮ ಎದುರುಗಡೆ ಬಂದು ನಿಲ್ಲಿಸಿರುತ್ತಾರೆ.  ಆ ವಾಹನದಿಂದ ಒಬ್ಬರು ಇಳಿದು ಬಂದು ನಮ್ಮನ್ನು ಯಾರು ನೀವು ಎಂದು ಪ್ರಶ್ನಿಸಿ ಮೆಣಸು ಲಾರಿ ಬರುತ್ತಿದೆ ನಮ್ಮನ್ನು ಅಡ್ಡಿ ಪಡಿಸಬೇಡಿ ಎಂದು ಚಾಸಾ1 ರವರನ್ನು ಕೇಳಿರುತ್ತಾರೆ. ಆಗ ಚಾಸಾ1 ರವರು ಯಾರು ನೀವು ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಬೇಡಿ ಎಂದು ಹೇಳಿರುತ್ತಾರೆ. ಆಗ ಆರೋಪಿತರು ಲಾರಿ ತಡೆಯಬೇಡಿ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಅವಾಜ್ ಹಾಕಿರುತ್ತಾರೆ.  ನಂತರ ಒಬ್ಬ ಆಸಾಮಿ/ಆರೋಪಿ1 ಚಾಸಾ1 ರವರ ಮೇಲೆ ಹಲ್ಲೆ ಮಾಡಲು ಬಂದಿರುತ್ತಾರೆ. ಆಗ ನಾನು ಇಳಿದು ಹಿಡಿದುಕೊಳ್ಳಲು ಹೋದಾಗ ಓಡಿ ಹೋಗಿರುತ್ತಾರೆ. ಚಾಸಾ1 ರವರು ಟಾರ್ಚ್ ಬೆಳಕಿನ ಸಹಾಯದಿಂದ ಆರೋಪಿತರ ಮುಖವನ್ನು ನೋಡಿರುತ್ತೇವೆ.  ಜೀಪ್ ನ ಬಳಿ ಇದ್ದ ಇನ್ನೊಬ್ಬರನ್ನು ಹಿಡಿದುಕೊಳ್ಳಲು ಹೋದಾಗ ಅವರು ಓಡಿ ಹೋಗಿರುತ್ತಾರೆ. ಆರೋಪಿತರು ಬಿಟ್ಟು ಹೋಗಿದ್ದ ಜೀಪಿನ ಸ.ಕೆ.ಎ-02-ಎಂ.ಎ-6571 ಆಗಿರುತ್ತದೆ.  ನಾನು ಮತ್ತು ಚಾಸಾ4 ರವರನ್ನು ಜೀಪಿನ ಬಳಿ ನಿಲ್ಲಿಸಿ ಚಾಸಾ1 ರವರು ಮೇಲಾಧಿಕಾರಿಗಳಿಗೆ ತಿಳಿಸಿರುತ್ತಾರೆ. ನಂತರ ಚಾಸಾ1 ರವರು ಸರಗೂರು ಪೋಲಿಸ್ ಠಾಣೆ ದೂರು ಕೊಟ್ಟಿರುತ್ತಾರೆ. ಅದೇ ದಿನ ಪಂಚನಾಮೆ ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ ಆಸಾಮಿಗಳು ಬಿಟ್ಟು ಹೋಗಿದ್ದ ಜೀಪ್ ನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ.  ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲುಃ  ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಸದರಿ ದಿನ ಆರೋಪಿತರು ನಮ್ಮ ವಾಹನವನ್ನು ಅಡ್ಡಗಟ್ಟಿ ಕೆಲಸಕ್ಕೆ ಅಡ್ಡಿಪಡಿಸಿರುತ್ತಾರೆಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

9.00 ಗಂಟೆಗೆ ಕಛೇರಿ ಬಿಟ್ಟು ರಾತ್ರಿ ಎಲ್ಲಾ ಗಸ್ತು ಮಾಡಿ 4.00 ಗಂಟೆಗೆ ಸ್ಥಳಕ್ಕೆ ಬಂದಿರುತ್ತೇನೆ. 9.00 ರಿಂದ 4.00 ಗಂಟೆಯ ವರೆಗೂ ಬೇಗೂರು, ಸರುಗೂರು, ಹೆಚ್.ಡಿ.ಕೋಟೆ, ನಂಜನಗೂಡು ಗಸ್ತು ಮಾಡಿರುತ್ತೇವೆ. ಆರೊಪಿತರು ಅಡ್ಡಗಟ್ಟಿ ನಮ್ಮ ವಾಹನವನ್ನು ತಡೆದಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ1 ನನ್ನ ಮೇಲಾಧಿಕಾರಿ ಎಂದರೆ ಸರಿ. ಚಾಸಾ1 ರವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದೇನೆಂದರೆ ಸರಿಯಲ್ಲ. ಸದರಿ ದಿನ ಗಸ್ತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಘಟನೆ ನಡೆಯದಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಾಹನ ಅಮಾನತ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಬೇರೆಯವರಿಂದ ಆರೋಪಿತರ ಹೆಸರು ತಿಳಿದುಕೊಂಡು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವಿಚಾರವಾಗಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**